# ಮುನ್ನೋಟ

# ಮುನ್ನೋಟ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು ಎರಡು ಭಾಗಗಳನ್ನು ಹೊಂದಿರುತ್ತದೆ. ಮೊದಲನೆಯ ಭಾಗವು ವೆಚ್ಚಗಳ ಲೆಕ್ಕಪರಿಶೋಧನೆಗೆ ಸಂಬಂಧಿತ ಒಂಬತ್ತು ಕಂಡಿಕೆಗಳನ್ನು ಒಳಗೊಂಡಿದೆ ಮತ್ತು ಎರಡನೆಯ ಭಾಗವು ರಾಜಸ್ವದ ಲೆಕ್ಕಪರಿಶೋಧನೆಗೆ ಸಂಬಂಧಿತ ಹದಿನಾಲ್ಕು ಕಂಡಿಕೆಗಳನ್ನು ಒಳಗೊಂಡಿದೆ.

## ಭಾಗ–I : ವೆಚ್ಚಗಳ ಲೆಕ್ಕಪರಿಶೋಧನೆ

### ಪರಿಚಯ

*ಆಯವ್ಯಯ ಚಿತ್ರಣ ಮತ್ತು ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ*

₹7,54,121 ಕೋಟಿಗಳ ಒಟ್ಟು ಆಯವ್ಯಯ ವೆಚ್ಚಕ್ಕೆ ಪ್ರತಿಯಾಗಿ 2019–20ರ ಅವಧಿಯಲ್ಲಿ ಸಂಪನ್ಮೂಲಗಳ ಅನ್ವಯವು ₹5,03,792 ಕೋಟಿಯಿದ್ದಿತು. ರಾಜ್ಯದ ಒಟ್ಟು ವೆಚ್ಚವು (ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲ ಮತ್ತು ಮುಂಗಡಗಳು) 2015–16ರಿಂದ 2019–20ರ ಅವಧಿಯಲ್ಲಿ ಶೇಕಡಾ 55ರಷ್ಟು ಏರಿಕೆಯಾಗಿತ್ತು ಮತ್ತು ರಾಜಸ್ವ ವೆಚ್ಚವು ಇದೇ ಅವಧಿಯಲ್ಲಿ ಶೇಕಡಾ 49ರಷ್ಟು ಏರಿಕೆಯಾಗಿತ್ತು. ರಾಜಸ್ವ ವೆಚ್ಚವು (₹1,74,258 ಕೋಟಿ) 2019–20ರ ಅವಧಿಯಲ್ಲಿ ಒಟ್ಟು ವೆಚ್ಚದ (₹2,13,857 ಕೋಟಿ) ಶೇಕಡಾ 81 ರಷ್ಟಿತ್ತು.

**(ಕಂಡಿಕೆ 1.2 ಮತ್ತು 1.3)**

*ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ*

ಮಾರ್ಚ್ 2020ರಲ್ಲಿದ್ದಂತೆ 54 ಇಲಾಖೆಗಳಿಗೆ ಸಂಬಂಧಿಸಿದ 38,140 ಕಂಡಿಕೆಗಳನ್ನು ಒಳಗೊಂಡ 7,516 ತಪಾಸಣಾ ವರದಿಗಳು ಬಾಕಿ ಉಳಿದಿದ್ದವು.

**(ಕಂಡಿಕೆ 1.10.1)**

*ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ*

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು 2006–07ರಿಂದ 2015–16ನೇ ವರ್ಷಗಳಿಗೆ ಎಸ್ಎಆರ್‌ಗಳನ್ನು ರಾಜ್ಯ ಶಾಸಕಾಂಗದಲ್ಲಿ ಮಂಡಿಸಿಲ್ಲ. ಕರ್ನಾಟಕ ಪಠ್ಯಪುಸ್ತಕ ಸಂಘವು 2007–08ನೇ ಸಾಲಿನ ಪರಿಷ್ಕೃತ ಲೆಕ್ಕಪತ್ರಗಳನ್ನು ಇನ್ನೂ ಸಲ್ಲಿಸಿಲ್ಲ ಮತ್ತು ಕರ್ನಾಟಕ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು (ಜುಲೈ 2009ರಲ್ಲಿ ಸ್ಥಾಪನೆಯಾಯಿತು) ಪ್ರಾರಂಭದಿಂದಲೂ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿಲ್ಲ.

**(ಕಂಡಿಕೆ 1.11)**

## ಅನುಪಾಲನಾ ಲೆಕ್ಕಪರಿಶೋಧನೆ

### ಉನ್ನತ ಶಿಕ್ಷಣ ಇಲಾಖೆ

#### *ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಸಮರ್ಪಕ ಆರ್ಥಿಕ ನಿರ್ವಹಣೆ*

ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಅಸಮರ್ಪಕ ಆರ್ಥಿಕ ನಿರ್ವಹಣೆಯ ₹12.97 ಲಕ್ಷ ದುರುಪಯೋಗ, ದಾಖಲೆಗಳ ತಿರುಚುವಿಕೆ (ಕೈಚಳಕ) ಮತ್ತು ಸಂಶಯಾಸ್ಪದ ದುರುಪಯೋಗ ₹1.28 ಲಕ್ಷ ಹಾಗೂ ₹87.87 ಲಕ್ಷ ಆದಾಯದಲ್ಲಿನ ನಷ್ಟದಲ್ಲಿ ಪರಿಣಮಿಸಿತು.

**(ಕಂಡಿಕೆ 2.1)**

#### *ಎನ್‌ಪಿಎಸ್ ನೌಕರರಿಗೆ ಅಂತಿಮ ಫಲ ನೀಡುವಿಕೆಯಲ್ಲಿನ ನಷ್ಟ*

ಪಿಂಚಣಿ ನಿಧಿ ನಿಯಮ ಹಾಗೂ ಅಭಿವೃದ್ಧಿ ಪ್ರಾಧಿಕಾರದ ನಿಯಮಗಳನ್ನು ರಾಷ್ಟ್ರೀಯ ಪಿಂಚಣಿ ಪದ್ಧತಿಗೆ ಅನುಗುಣವಾಗಿ ಜಾರಿಗೊಳಿಸದಿರುವುದು, ಮೂರು ವಿಶ್ವವಿದ್ಯಾಲಯಗಳಲ್ಲಿ 01 ಏಪ್ರೀಲ್ 2006ರ ನಂತರ ಸೇರಿದ 577 ನೌಕರರಿಗೆ ₹2.83 ಕೋಟಿ ನಷ್ಟದಲ್ಲಿ ಪರಿಣಮಿಸಿತು.

**(ಕಂಡಿಕೆ 2.2)**

### ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

#### *ಸರ್ಕಾರದ ರಾಜಸ್ವವನ್ನು ಜಮೆ ಮಾಡದಿರುವುದರಿಂದ ನಷ್ಟ ಹಾಗು ದುರುಪಯೋಗ*

ಸಹಾಯಕ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಚನ್ನಪಟ್ಟಣದಲ್ಲಿ, ನಗದು ಸ್ವೀಕೃತಿಗಳನ್ನು ಸರ್ಕಾರದ ಖಾತೆಗೆ ಜಮೆ ಮಾಡದಿರುವುದರಿಂದ ಹಾಗು ದಾಖಲೆಗಳಲ್ಲಿ ಕೈಚಳಕ ಮಾಡಿರುವುದರಿಂದ, ಸರ್ಕಾರದ ರಾಜಸ್ವದ ದುರುಪಯೋಗವಾಗುವಲ್ಲಿ ಹಾಗು ನಷ್ಟವಾಗುವಲ್ಲಿ ಪರಿಣಮಿಸಿತು–₹1.38 ಲಕ್ಷ.

**(ಕಂಡಿಕೆ 2.3)**

### ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ

#### *ಅಕ್ಕಿ ಖರೀದಿಯ ಮೇಲೆ ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ*

ಹಣದ ಲಭ್ಯತೆಯಿದ್ದಾಗ್ಯೂ ಛತ್ತೀಸಘಡದ ರಾಜ್ಯ ಆಹಾರ ನಿಗಮಕ್ಕೆ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತವು ಖರೀದಿಸಿದ ಅಕ್ಕಿಗೆ ವಿಳಂಬವಾಗಿ ಪಾವತಿ ಮಾಡಿತು. ಇದು ₹5.25 ಕೋಟಿಯಷ್ಟು ತಪ್ಪಿಸಬಹುದಾಗಿದ್ದ ಅಧಿಕ ಬಡ್ಡಿ ಪಾವತಿಯಲ್ಲಿ ಪರಿಣಮಿಸಿತು.

**(ಕಂಡಿಕೆ 2.4)**

### ಕಾರ್ಮಿಕ ಇಲಾಖೆ

#### *ಕಡಿಮೆ/ ವಸೂಲಾತಿಯಾಗದ ರಾಜಸ್ವ*

ನೋಂದಣಿ/ನವೀಕರಣದ ಪರಿಷ್ಕೃತ ದರಗಳನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ವಿಳಂಬವಾಗಿ ಇಂಧೀಕರಿಸಿರುವುದರ ಪರಿಣಾಮವಾಗಿ ₹2.38 ಕೋಟಿ ರಾಜಸ್ವ ಕೊರತೆಯುಂಟಾಯಿತು. ಅಂಗಡಿ ಹಾಗೂ

ವಾಣಿಜ್ಯ ಸಂಸ್ಥೆಗಳ ನೋಂದಣಿ / ನವೀಕರಣಗೊಳಿಸುವಿಕೆಯಲ್ಲಿನ ಬೃಹತ್ ಬಾಕಿ ಉಳಿದಿರುವುದರ ಪರಿಣಾಮವಾಗಿ ₹37.21 ಕೋಟಿ ವಸೂಲಾಗದ ರಾಜಸ್ವದೊಂದಿಗೆ ಸಂಸ್ಥೆಗಳು ನಿರಂತರವಾಗಿ ಊರ್ಜಿತ ನೋಂದಣಿಗಳಿಲ್ಲದೇ ಕಾರ್ಯನಿರ್ವಹಿಸುತ್ತಿದ್ದವು.

**(ಕಂಡಿಕೆ 2.5)**

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

### *ಋಣವಿಮೋಚನ ನಷ್ಟದಲ್ಲಿ ಕಡಿಮೆ ವಿಧಿಸಿರುವುದು*

ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರುಗಳ ಶಿಫಾರಸಿನಂತೆ ಆರೋಗ್ಯ ಇಂಜಿನೀಯರಿಂಗ್ ವಿಭಾಗದ ಮುಖ್ಯ ಇಂಜಿನೀಯರವರಿಂದ ವಿಳಂಬವಾಗಿ ಪೂರ್ಣಗೊಳಿಸಿದ ಕಾಮಗಾರಿಗಳ ಮೇಲೆ ಅತ್ಯಲ್ಪ ದಂಡವನ್ನು ವಿಧಿಸಲಾಗಿದೆ. ಇದು ₹14.63 ಕೋಟಿ ಕಡಿಮೆ ವಿಧಿಸಿರುವುದಲ್ಲದೇ, ಗುತ್ತಿಗೆದಾರರಿಗೆ ಅನುಚಿತ ಲಾಭವನ್ನು ವಿಸ್ತರಿಸುವಲ್ಲಿ ಪರಿಣಮಿಸಿತು

**(ಕಂಡಿಕೆ 2.6)**

### *ತಪ್ಪಿಸಬಹುದಾಗಿದ್ದ ವೆಚ್ಚ*

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನೀಯರಿಂಗ್ ಉಪವಿಭಾಗದಲ್ಲಿ ಎಮ್ 25 ಗ್ರೇಡ್ ಕಾಂಕ್ರೀಟ್‌ಗೆ ಅಂದಾಜು/ಬಿಒಕ್ಯು (ಬಿಲ್ ಆಫ್ ಕ್ವಾಂಟಿಟಿ) ನಲ್ಲಿ ರೆಡಿಮಿಕ್ಸ್ ಕಾಂಕ್ರೀಟ್‌ಗೆ ಪ್ರತಿಯಾಗಿ ಸಿಮೆಂಟ ಕಾಂಕ್ರೀಟ್ (ಮಷಿನ್ ಮಿಶ್ರಣ) ಅಳವಡಿಸಿಕೊಂಡಿರುವುದು ₹3.30 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚ ಹಾಗೂ ಗುತ್ತಿಗೆದಾರನಿಗೆ ಅನುಚಿತ ಲಾಭದಲ್ಲಿ ಪರಿಣಮಿಸಿತು.

**(ಕಂಡಿಕೆ 2.7)**

### *ವಾಸ್ತವವಾಗಿ ಕಾಮಗಾರಿಗಳನ್ನು ಕೈಗೊಳ್ಳದೇ ಕೃತ್ರಿಮವಾಗಿ ಪ್ರಮಾಣೀಕರಿಸಿರುವುದು*

ಕಲಬುರಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪವಿಭಾಗದ ಸಹಾಯಕ ಇಂಜಿನೀಯರವರು ವಾಸ್ತವವಾಗಿ ಕಾಮಗಾರಿ ಬಾಬ್ತುಗಳನ್ನು ಕೈಗೊಳ್ಳದೇ ಅಳತೆ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇದನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರು ಪ್ರಮಾಣೀಕರಿಸಿರುತ್ತಾರೆ ಹಾಗೂ ಇದನ್ನು ಕಾರ್ಯನಿರ್ವಾಹಕ ಇಂಜಿನೀಯರು ಅನುಮೋದಿಸಿದ್ದಾರೆ. ಇದು ₹97.59 ಲಕ್ಷ ಅಕ್ರಮ ಸಂದಾಯದೊಂದಿಗೆ ಗುತ್ತಿಗೆದಾರನಿಗೆ ಅನುಚಿತ ಲಾಭದಲ್ಲಿ ಪರಿಣಮಿಸಿತು.

**(ಕಂಡಿಕೆ 2.8)**

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

### *ಅಂಗೀಕಾರಾರ್ಹವಲ್ಲದ ಸೇವೆಗಳ ಮೇಲೆ ತಪ್ಪಿಸಬಹುದಾಗಿದ್ದ ಸರಕು ಮತ್ತು ಸೇವಾ ತೆರಿಗೆಯ ವೆಚ್ಚ*

ಸರಕು ಮತ್ತು ಸೇವಾ ತೆರಿಗೆಯ ದರವು ಶೂನ್ಯ ಇರುವ 'ಅಪ್ಪಟ ಸೇವೆಗಳ' ಅಡಿ ಬರುವ ಮಾನವ ಸಂಪನ್ಮೂಲ ಏಜೆನ್ಸಿಗಳು ನೀಡಿದ ಸೇವೆಗಳಿಗೆ ಜಿಲ್ಲಾ ಪಂಚಾಯತ್‌ಗಳಿಂದ ಮಾಡಲಾದ ಪಾವತಿಯು ಅಂಗೀಕಾರಾರ್ಹವಲ್ಲದ ಸೇವೆಗಳ ಮೇಲೆ ₹1.29 ಕೋಟಿಗಳಷ್ಟು ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.

**(ಕಂಡಿಕೆ 2.9)**

## ಭಾಗ–II : ರಾಜಸ್ವ/ವರಮಾನ ಲೆಕ್ಕಪರಿಶೋಧನೆ

### *ಸಾಮಾನ್ಯ*

2019–20 ಸಾಲಿಗೆ ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು ಹಿಂದಿನ ಸಾಲಿನ ₹ 1,64,978.66 ಕೋಟಿ ಮೊತ್ತಕ್ಕೆ ಪ್ರತಿಯಾಗಿ ₹ 1,75,442.79 ಕೋಟಿ ಆಗಿದ್ದಿತು. ಇದರ ಪೈಕಿ, ಶೇಕಡಾ 63ರಷ್ಟನ್ನು ರಾಜ್ಯವು ತೆರಿಗೆ ವರಮಾನ (₹ 1,02,362.79 ಕೋಟಿ) ಹಾಗೂ ತೆರಿಗೆಯೇತರ ವರಮಾನದ (₹ 7,681.47 ಕೋಟಿ) ಮೂಲಕ ಸಂಗ್ರಹಿಸಿದ್ದಿತು. ಉಳಿಕೆ ಶೇಕಡಾ 37ರಷ್ಟನ್ನು ಕೇಂದ್ರ ಸರ್ಕಾರದಿಂದ ಕೇಂದ್ರೀಯ ವಿಭಜನೀಯ ತೆರಿಗೆಗಳ ರಾಜ್ಯದ ಪಾಲಾಗಿ (₹ 30,919.00 ಕೋಟಿ) ಹಾಗೂ ಸಹಾಯಾನುಧಾನವಾಗಿ (₹ 34,479.53 ಕೋಟಿ) ಸ್ವೀಕರಿಸಿದ್ದಿತು.

**(ಕಂಡಿಕೆ 1.1)**

1,652 ಪರೀಕ್ಷಣಾ ವರದಿಗಳಲ್ಲಿ (ಡಿಸೆಂಬರ್ 2019ರವರೆಗೆ ನೀಡಲಾದಂತಹ) ₹ 2,782.82 ಕೋಟಿ ಮೊತ್ತವು ಒಳಗೊಂಡಂತೆ 4,831 ಕಂಡಿಕೆಗಳು ಜೂನ್ 2020 ಅಂತ್ಯದಲ್ಲಿದ್ದಂತೆ ಬಾಕಿ ಉಳಿದಿದ್ದವು.

**(ಕಂಡಿಕೆ 1.5)**

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ಮುದ್ರಾಂಕ ಮತ್ತು ನೋಂದಣಿ, ರಾಜ್ಯ ಅಬಕಾರಿ ಹಾಗೂ ಇತರೆ ಇಲಾಖಾ ಕಚೇರಿಗಳ 254 ಘಟಕಗಳ ದಾಖಲೆಗಳ 2019–20 ಸಾಲಿನಲ್ಲಿ ನಡೆಸಲಾದಂತಹ ಪರೀಕ್ಷಾ ಪರಿಶೀಲನೆಯು 1.189 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 2,491.66 ಕೋಟಿ ಮೊತ್ತದಷ್ಟು ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇತ್ಯಾದಿಗಳನ್ನು ತೋರಿಸಿಕೊಟ್ಟಿತು.

**(ಕಂಡಿಕೆ 1.8)**

### ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ಮೌಲ್ಯ ವರ್ಧಿತ ತೆರಿಗೆ ಹಾಗು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗಳು

208 ಕರದಾತರುಗಳು ತೆರಿಗೆಯನ್ನು ವಿಳಂಬವಾಗಿ ಪಾವತಿಸಿದ್ದಕ್ಕಾಗಿ ಕರ್ನಾಟಕ ಮೌವತೆ ಅಧಿನಿಯಮದ ಪರಿಚ್ಛೇದ 72(1)ರ ಅಡಿಯಲ್ಲಿ ಹಾಗೂ 7,346 ಕರದಾತರುಗಳು ನಮೂನೆ – ಮೌವತೆ – 240ನ್ನು ಸಲ್ಲಿಸದಿದ್ದುದಕ್ಕಾಗಿ ಪರಿಚ್ಛೇದ 74(4)ರ ಅಡಿಯಲ್ಲಿ ದಂಡವನ್ನು ವಿಧಿಸದಿದ್ದುದು ₹ 32.72 ಕೋಟಿ ಮೊತ್ತದಷ್ಟು ಅಗಿದ್ದಿತು.

**(ಕಂಡಿಕೆ 2.5 ಮತ್ತು 2.12)**

ನಗರ ಪ್ರದೇಶಗಳಲ್ಲಿ ಇದ್ದಂತಹ 30 ಬಾರುಗಳು ಮತ್ತು ರೆಸ್ಟೋರೆಂಟುಗಳು ಮಾರ್ಚ್ 2014ರಿಂದ ಮಾರ್ಚ್ 2017ರ ಅವಧಿಯಲ್ಲಿ ಮಾಡಿದ್ದಂತಹ ಮಧ್ಯ ಮಾರಾಟಗಳ ಮೇಲೆ ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದಂತಹ ತೆರಿಗೆಯು ಬಡ್ಡಿ ಮತ್ತು ದಂಡವೂ ಸೇರಿದಂತೆ ₹6.15 ಕೋಟಿ ಆಗಿದ್ದಿತು.

**(ಕಂಡಿಕೆ 2.6)**

ನಮೂನೆ 240, ಮೂಲದಲ್ಲಿಯೇ ಕಡಿದುಕೊಳ್ಳಲಾದ ತೆರಿಗೆ ಪ್ರಮಾಣಪತ್ರಗಳು ಮತ್ತು ಪುನರ್–ಕರನಿರ್ಧಾರಣಾ ಆದೇಶಗಳ ಪರಿಶೀಲನೆಯು 16 ಕರದಾತರುಗಳು ₹ 2.66 ಕೋಟಿ ಮೊತ್ತದಷ್ಟು ಮದ್ಯಂತರ ಅವಧಿ ತೆರಿಗೆ ಜಮೆಗಳನ್ನು ಅಧಿಕ ಪ್ರಮಾಣದಲ್ಲಿ ಉಪಯೋಗಿಸಿಕೊಂಡಿದ್ದರು ಎಂಬುದನ್ನು ತೋರಿಸಿಕೊಟ್ಟಿತು.

**(ಕಂಡಿಕೆ 2.7)**

13 ವರ್ತಕರುಗಳಿಂದ ಉಪ–ಗುತ್ತಿಗೆದಾರರುಗಳಿಗೆ ಮಾಡಲಾಗಿದ್ದಂತಹ ಪಾವತಿಗಳನ್ನು ತಪ್ಪಾಗಿ ಅನುಮತಿಸಿದ್ದರ ಕಾರಣ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು ₹ 1.16 ಕೋಟಿ ಮೊತ್ತದಷ್ಟು ಆಗಿದ್ದಿತು.

**(ಕಂಡಿಕೆ 2.8)**

ಮುಂದಿನ ತೆರಿಗೆ ಅವಧಿಗೆ ಮುಂದಕ್ಕೆ ತರಲಾಗಿದ್ದಂತಹ ಹಾಗೂ ಮಾರಾಟಗಳ ಮೇಲಿನ ತೆರಿಗೆ ಬಾಧ್ಯತೆಗಳ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗಿದ್ದಂತಹ ತೆರಿಗೆ ಜಮೆ ಮೊತ್ತಗಳನ್ನು ಹಿಂದಿನ ತೆರಿಗೆ ಅವಧಿಗಳಿಗೆ ಸಲ್ಲಿಸಲಾಗಿದ್ದಂತಹ ಸಲ್ಲಿಕೆಗಳು, ನಮೂನೆ ಮೌವತೆ 240 ಹಾಗೂ ಪುನರ್–ಕರನಿರ್ಧಾರಣೆಗಳ ಜೊತೆಯಲ್ಲಿ ಮಾಡಲಾದಂತಹ ಅಡ್ಡ–ಪರಿಶೀಲನೆಯು 12 ವರ್ತಕರುಗಳು ₹ 1.56 ಕೋಟಿ ಮೊತ್ತದಷ್ಟು ತೆರಿಗೆ ಜಮೆಯನ್ನು ಅಧಿಕ ಪ್ರಮಾಣದಲ್ಲಿ ಮುಂದಿನ ತೆರಿಗೆ ಅವಧಿಗೆ ಮುಂದಕ್ಕೆ ತಂದಿದ್ದರು/ಹೊಂದಾಣಿಕೆ ಮಾಡಿಕೊಂಡಿದ್ದರು ಎಂಬುದನ್ನು ತೋರಿಸಿಕೊಟ್ಟಿತು, ಈ ನಿಟ್ಟಿನಲ್ಲಿ ಒಟ್ಟಾರೆ ತೆರಿಗೆ ಬಾಧ್ಯತೆಯು ದಂಡ ಮತ್ತು ಬಡ್ಡಿಯೂ ಸೇರಿದಂತೆ ₹ 2.67 ಕೋಟಿ ಆಗಿದ್ದಿತು.

**(ಕಂಡಿಕೆ 2.9)**

ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದಂತಹ ಲೆಕ್ಕಪತ್ರಗಳಲ್ಲಿ ಲೆಕ್ಕಪರಿಶೋಧಕರುಗಳು ನಿರ್ಧಾರಣೆ ಮಾಡಿದ್ದಂತಹ ₹ 6.11 ಕೋಟಿ (ಬಡ್ಡಿ ಮತ್ತು ದಂಡವೂ ಸೇರಿದಂತೆ) ಮೊತ್ತದಷ್ಟು ಹೆಚ್ಚುವರಿ ತೆರಿಗೆ ಬಾಧ್ಯತೆಯನ್ನು 65 ವರ್ತಕರುಗಳು ಪಾವತಿಸಿರಲಿಲ್ಲ.

**(ಕಂಡಿಕೆ 2.10)**

ಸಲ್ಲಿಕೆಗಳಲ್ಲಿ ಘೋಷಿಸಿಕೊಳ್ಳಲಾಗಿದ್ದಿತಾದರೂ, ₹ 5.25 ಕೋಟಿ ಮೊತ್ತದಷ್ಟು (ಬಡ್ಡಿ ಮತ್ತು ದಂಡವೂ ಸೇರಿದಂತೆ) ತೆರಿಗೆಯನ್ನು 93 ವರ್ತಕರುಗಳು ಪಾವತಿಸಿರಲಿಲ್ಲ.

**(ಕಂಡಿಕೆ 2.11)**

ತೆರಿಗೆ ಪಾವತಿಯಿಂದ ವಿನಾಯಿತಿ ಹೊಂದಿದ್ದಂತಹ ಸರಕುಗಳು ಮತ್ತು ಸ್ಥಿರಾಸ್ತಿಗಳ ಮೇಲೆ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು (ಐಟಿಸಿ) ತಪ್ಪಾಗಿ ಅನುಮತಿಸಿದ್ದುದು, ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ತಪ್ಪಾಗಿ ಲೆಕ್ಕಹಾಕಿದ್ದುದು ಹಾಗೂ ಅನುಗುಣವಾದಂತಹ ಮಾರಾಟಗಳ ಮೇಲಿನ ತೆರಿಗೆಯನ್ನು ಸಂಗ್ರಹಿಸದೆಯೇ ಖರೀದಿಗಳ ಮೇಲಿನ ತೆರಿಗೆ ಜಮೆಯನ್ನು ಅನುಮತಿಸಿದ್ದ ಕಾರಣ ₹ 4.47 ಕೋಟಿ ಮೊತ್ತದಷ್ಟು ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಿತು.

**(ಕಂಡಿಕೆ 2.13)**

### *ಮುದ್ರಾಂಕ ಸುಂಕ ಮತ್ತು ನೊಂದಣಿ ಶುಲ್ಕ*

ಆರು ಪ್ರಕರಣಗಳಲ್ಲಿ ಗುತ್ತಿಗೆ ಒಡಂಬಡಿಕೆ ಪತ್ರಗಳು, ಮಾರಾಟ – ಒಡಂಬಡಿಕೆಗಳು ಮತ್ತು ವ್ಯವಹಾರಾಧಿಕಾರಗಳನ್ನು ಅವುಗಳ ಉಪ–ಷರತ್ತುಗಳಿಗೆ ಸಂಬಂಧಿಸಿದಂತೆ ತಪ್ಪಾಗಿ ವರ್ಗೀಕರಿಸಿದ್ದು ₹ 22.83 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿತು.

**(ಕಂಡಿಕೆ 3.4)**

ಕಟ್ಟಡಗಳು, ಸ್ಥಾವರ ಮತ್ತು ಯಂತ್ರಗಳು ಇರುವಿಕೆ ಹಾಗೂ ಖರೀದಿದಾರರು ನೀಡಿದ್ದಂತಹ ವಾಸ್ತವಿಕ ಪ್ರತಿಫಲವನ್ನು ಸ್ಪಷ್ಟಪಡಿಸದ ಕಾರಣ 25 ಪ್ರಕರಣಗಳಲ್ಲಿ ಆಸ್ತಿಗಳನ್ನು ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡುವಲ್ಲಿಗೆ ಹಾಗೂ ತತ್ಪರಿಣಾಮವಾಗಿ ₹ 10.14 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

**(ಕಂಡಿಕೆ 3.5)**

ಒಂಬತ್ತು ಉಪ-ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ 62 ಜಂಟಿ ಅಭಿವೃದ್ಧಿ ಒಡಂಬಡಿಕೆಗಳಲ್ಲಿ ಅಸಮರ್ಪಕವಾಗಿ ಪಡೆದುಕೊಳ್ಳಲಾಗಿದ್ದಂತಹ ಮಾಹಿತಿಗಳ ಆಧಾರದ ಮೇರೆಗೆ ಅಳವಡಿಸಿಕೊಳ್ಳಲಾದ ತಪ್ಪು ದರಗಳು, ಮೌಲ್ಯಮಾಪನಗಳು ₹ 6.59 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

**(ಕಂಡಿಕೆ 3.6)**

ತಪ್ಪು ಮಾರ್ಗಸೂಚಿ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದು ಹಾಗೂ ವಿಶೇಷ ನಿರ್ದೇಶನಗಳಿಗೆ ಬದ್ಧವಾಗಿರದಿದ್ದುದು, ಇತ್ಯಾದಿಗಳು 25 ಪ್ರಕರಣಗಳಲ್ಲಿ ಆಸ್ತಿಗಳನ್ನು ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನ ಮಾಡುವಲ್ಲಿಗೆ ಹಾಗೂ ತತ್ಪರಿಣಾಮವಾಗಿ ₹ 4.81 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದವು.

**(ಕಂಡಿಕೆ 3.7)**

ವಿವಿಧ/ಅನ್ಯ ಅಸ್ತಿತ್ವಗಳ ನಡುವೆ ಉಡುಗೊರೆ/ದಾನ ಪತ್ರಗಳನ್ನು ಕುಟುಂಬದ ಸದಸ್ಯರುಗಳ ನಡುವೆ ಎಂಬುದಾಗಿ ತಪ್ಪಾಗಿ ವರ್ಗೀಕರಿಸಿದ್ದು ಏಳು ಪ್ರಕರಣಗಳಲ್ಲಿ ₹ 1.13 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

**(ಕಂಡಿಕೆ 3.8)**